ರವಿರಾಜ ಬೈಕಂಪಾಡಿ

# ಒಂದು ನಾಪತ್ತೆ ಪ್ರಸಂಗ

ನಾನು ಈಗ ಹೇಳ ಹೊರಟಿರುವ ಕತೆ, ನನ್ನ ಮಿತ್ರ ಹಾಗೂ ವಕೀಲ ವೃತ್ತಿಯಲ್ಲಿ ನನ್ನ ಸೀನಿಯರ್ ಆಗಿರುವ ಅಡ್ಡಂಡ ಕರಮಚಂದ ಬಗೆಹರಿಸಿದ ಅನೇಕ ಪ್ರಕರಣಗಳಲ್ಲಿ ಅತಿ ಹೆಚ್ಚು ನನ್ನ ಗಮನ ಸೆಳೆದಂತಹುದಾಗಿದೆ. ಆತನ ಪತ್ತೇದಾರಿಕೆಯ ಹೆಚ್ಚಿನ ಪ್ರಕರಣಗಳು ನನ್ನ ಗಣಕಯಂತ್ರದಲ್ಲಿ ಈಗಾಗಲೇ ದಾಖಲಿಸಲ್ಪಟ್ಟಿವೆ. ವಿರಾಮದ ವೇಳೆಯಲ್ಲಿ ಅದರಲ್ಲಿ ಕಣ್ಣಾಡಿಸುವುದು ನಿಜಕ್ಕೂ ಚೇತೋಹಾರಿ. ಆತನ ಪತ್ತೇದಾರಿಕೆಯ ಶೈಲಿ, ಬಳಸುತ್ತಿದ್ದ ತಂತ್ರಗಳು ಮತ್ತು ವಿಷಯಗಳನ್ನು ಆಧರಿಸಿ ಆತ ಮಾಡುತ್ತಿದ್ದ ಊಹನೆಗಳು... ಎಲ್ಲವೂ ಅಸದೃಶ ಹಾಗೂ ಕೌತುಕಮಯ. ವಕೀಲರಾದರೂ ನಾವು ವಕೀಲಿ ವೃತ್ತಿ ನಡೆಸುತ್ತಿದ್ದುದು ಕಮ್ಮಿ. ಇಂದಿಗೆ ಎರಡು ವರ್ಷಗಳ ಹಿಂದೆ ನಡೆದ ತಾಪಂಡ ಮೋಹಿತನ ಪ್ರಕರಣವನ್ನು ಭೇದಿಸುವಲ್ಲಿ ಕರಮಚಂದನ ಕಾರ್ಯತಂತ್ರ ಅಮೋಘವಾದುದು... ಈ ವಿಚಿತ್ರ ಪ್ರಕರಣಕ್ಕೆ 'ಒಂದು ನಾಪತ್ತೆ ಪ್ರಸಂಗ' ಎನ್ನುವ ಶೀರ್ಷಿಕೆ ಸೂಕ್ತ ಎಂಬುದು ನನ್ನ ಅಭಿಪ್ರಾಯ.

